2 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರವರ ನ್ಯಾಯಾಲಯದಲ್ಲಿ,
ಚಿಕ್ಕಮಗಳೂರು

ಸತ್ರ ಮೊಕದ್ದಮೆ ನಂಃ 102/2016

| | | |
|---|---|---|
| ಸಾಕ್ಷಿದಾರರ ಹೆಸರು | - ಆರೀಫ್ ಎಂ ಮುಷಾಪುರಿ | ಪಿಡಬ್ಲೂ -17 |
| ತಂದೆಯ ಹೆಸರು | - ಮಲ್ಲೀಕ್ ಸಾಬ್ ಮುಷಾಪುರಿ | ಸಿಡಬ್ಲೂ -28 |
| ವಯಸ್ಸು | - 37 ವರ್ಷ | |
| ಉದ್ಯೋಗ | - ಆರಕ್ಷಕ ಉಪ ನಿರೀಕ್ಷಕರು, ಎಸ್ ಪಿ ಕಚೇರಿ, ಬೀಜಾಪುರ | |
| ವಾಸ ಸ್ಥಳ | - ಬೀಜಾಪುರ | |

ದಿನಾಂಕಃ 16.09.2023 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.

ಮುಖ್ಯ ವಿಚಾರಣೆಃ ಸರ್ಕಾರಿ ಅಭಿಯೋಜಕರಿಂದಃ

1. ನಾನು ದಿನಾಂಕ 08.12.2015 ರಿಂದ ದಿನಾಂಕ 05.05.2016 ರವರೆಗೆ ಬಸವನಹಳ್ಳಿ ಪೊಲೀಸ್ ಠಾಣೆಯಲ್ಲಿ ಆರಕ್ಷಕ ಉಪ ನಿರೀಕ್ಷಕನಾಗಿ ಕರ್ತವ್ಯ ನಿರ್ವಹಿಸಿದ್ದೇನೆ.

2. ದಿನಾಂಕಃ 28.02.2016 ರಂದು ಬೆಳಗಿನ ಜಾವ 3.30 ಗಂಟೆಗೆ ನಾನು ಠಾಣೆಯಲ್ಲಿದ್ದ ಸಮಯದಲ್ಲಿ ಹಾಸನ ಮಹಿಳಾ ಪೊಲೀಸ್ ಠಾಣೆಯ ಪಿ ಸಿ 244 ಮೋಹನ್ ಕುಮಾರ್ ರವರು ಹಾಸನ ಮಹಿಳಾ ಪೊಲೀಸ್ ಠಾಣೆಯಲ್ಲಿ ಮೊಕದ್ದಮೆ ಸಂಖ್ಯೆ 2/2016 ರಂತೆ ದಾಖಲಾಗಿದ್ದ ಪ್ರಕರಣದ ಕಡತವನ್ನು ಕೃತ್ಯ ನಡೆದ ಸ್ಥಳದ ಆಧಾರದ ಮೇರೆಗೆ ವರ್ಗಾವಣೆಗೊಂಡಿದ್ದ ಕಾರಣ ಸದರಿ ಪ್ರಕರಣದ ಹೇಳಿಕೆಯ ದೂರು, ಪ್ರಥಮ ವರ್ತಮಾನ ವರದಿ, ನ್ಯಾಯಾಲಯದಿಂದ ಪಡೆದುಕೊಂಡ ಅನುಮತಿ ಪತ್ರವನ್ನು ಸದರಿ ಮಹಿಳಾ ಪೊಲೀಸ್ ಠಾಣೆಯ ಆರಕ್ಷಕ ಉಪ ನಿರೀಕ್ಷಕರರಾದ ಪ್ರಾಸಾ.16 ರವರ ಪತ್ರದೊಂದಿಗೆ ತಂದು ಹಾಜರುಪಡಿಸಿರುತ್ತಾರೆ.

3. ನಾನು ಅವುಗಳನ್ನು ಸ್ವೀಕರಿಸಿ ಸದರಿ ದೂರಿನ ಮೇರೆಗೆ ನಮ್ಮ

ಠಾಣೆಯಲ್ಲಿ ಮೊಕದ್ದಮೆ ಸಂಖ್ಯೆ: 57/2016 ರಂತೆ ಪ್ರಕರಣ ದಾಖಲಿಸಿ ಪ್ರಥಮ ವರ್ತಮಾನ ವರದಿಯನ್ನು ನ್ಯಾಯಾಲಯಕ್ಕೆ ಮತ್ತು ಮೇಲಾಧಿಕಾರಿಗಳಿಗೆ ನಿವೇದಿಸಿಕೊಂಡಿರುತ್ತೇನೆ. ಸದರಿ ಹೇಳಿಕೆಯ ದೂರು, ಹಾಸನ ಮಹಿಳಾ ಪೊಲೀಸ್ ಠಾಣೆಯ ಪ್ರಥಮ ವರ್ತಮಾನ ವರದಿ, ನ್ಯಾಯಾಲಯದ ಅನುಮತಿ ಪತ್ರ ಮತ್ತು ಪ್ರಾಸಾ.16 ರವರ ಪತ್ರಗಳನ್ನು ನೋಡುತ್ತಿದ್ದು ಅವುಗಳನ್ನು ಈಗಾಗಲೇ ನಿಪಿ.1, ನಿಪಿ.25 ರಿಂದ ನಿಪಿ.27 ಎಂದು ಗುರುತಿಸಲಾಗಿರುತ್ತದೆ. ನಿಪಿ.27 ರಲ್ಲಿ ನಾನು ಬರೆದ ಹಿಂಬರವನ್ನು ನೋಡುತ್ತಿದ್ದು ಅದನ್ನು ನಿಪಿ.27(ಬಿ) ಎಂದು, ಅದರಲ್ಲಿರುವ ನನ್ನ ಸಹಿಯನ್ನು ನಿಪಿ.27(ಸಿ) ಎಂದು ಗುರುತಿಸಲಾಯಿತು. ನಾನು ದಾಖಲು ಮಾಡಿದ್ದ ಪ್ರಥಮ ವರ್ತಮಾನ ವರದಿಯನ್ನು ನೋಡುತ್ತಿದ್ದು ಅದನ್ನು ನಿಪಿ.28 ಎಂದು ಅದರಲ್ಲಿರುವ ಸಾಕ್ಷಿಯ ಸಹಿಯನ್ನು ನಿಪಿ.28(ಎ) ಎಂದು ಗುರುತಿಸಲಾಯಿತು.

4. ಅದೇ ದಿನ ಬೆಳಗಿನ ಜಾವ 4.00 ಗಂಟೆಗೆ ಪ್ರಕರಣದ ಗಾಯಾಳು ಅನಿತಾರವರು ಚಿಕಿತ್ಸೆ ಫಲಕಾರಿಯಾಗದೇ ಬೆಂಗಳೂರಿನ ವಾಣಿ ವಿಲಾಸ ಆಸ್ಪತ್ರೆಯಲ್ಲಿ ದಿನಾಂಕ 27.02.2016 ರಂದು ರಾತ್ರಿ 10.00 ಗಂಟೆಗೆ ಮೃತಪಟ್ಟಿದ್ದಾಗಿ ನನಗೆ ಮಾಹಿತಿ ಬಂದಿರುತ್ತದೆ.

5. ತನಿಖೆಯ ಸಲುವಾಗಿ ಚಾಸಾ.23 ಮತ್ತು ಚಾಸಾ.24 ರವರನ್ನು ಮೃತಳ ಶವ ಪರೀಕ್ಷೆಯನ್ನು ನಡೆಸಲು ನೇಮಿಸಿ ಬೆಂಗಳೂರಿಗೆ ಕಳುಹಿಸಿಕೊಟ್ಟಿರುತ್ತೇನೆ. ನಂತರ ಪ್ರಕರಣಕ್ಕೆ ಐ ಪಿ ಸಿ ಕಲಂ 304 ಬಿ ಯನ್ನು ಅಳವಡಿಸಿಕೊಳ್ಳಲು ನ್ಯಾಯಾಲಯಕ್ಕೆ ಮನವಿ ಸಲ್ಲಿಸಿರುತ್ತೇನೆ.

6. ಪ್ರಕರಣವು ಘೋರ ಅಪರಾಧಗಳನ್ನೊಳಗೊಂಡಿದ್ದರಿಂದ ಚಾಸಾ.29 ರವರಿಗೆ ಮಾಹಿತಿ ನೀಡಿರುತ್ತೇನೆ. ಅವರು ಅನ್ಯ ಕರ್ತವ್ಯದಲ್ಲಿದ್ದ ಕಾರಣ ಅವರ ಮೌಖಿಕ ಆದೇಶದ ಮೇರೆಗೆ ತನಿಖೆಯನ್ನು ಮುಂದುವರೆಸಿರುತ್ತೇನೆ.

7. ದಿನಾಂಕ 29.02.2016 ರಂದು ಬೆಳಿಗ್ಗೆ 10.00 ಗಂಟೆಗೆ ಚಾಸಾ.23 ಮತ್ತು ಚಾಸಾ.24 ರವರು ಜರುಗಿಸಿದ ಶವ ಪಂಚನಾಮೆಯನ್ನು ತಂದು ಹಾಜರುಪಡಿಸಿದ್ದು ಅದನ್ನು ಕಡತಕ್ಕೆ ಅಳವಡಿಸಿಕೊಂಡಿರುತ್ತೇನೆ. ನಂತರ ಅದೇ ದಿನ ಮೃತ ಅನಿತಾ ಆರೋಪಿತರೊಂದಿಗೆ ವಾಸವಿದ್ದ ಚಿಕ್ಕಮಗಳೂರಿನ ತಿಲಕ್ ಪಾರ್ಕ್ ರಸ್ತೆಯಲ್ಲಿದ್ದ ರುದ್ರಪ್ಪರವರಿಗೆ ಸೇರಿದ ಮನೆಯಲ್ಲಿ ಕೃತ್ಯ ನಡೆದ ಸ್ಥಳಕ್ಕೆ ಭೇಟಿ ನೀಡಿ ಸ್ಥಳದಲ್ಲಿ ಹಾಜರಿದ್ದ ಪ್ರಾಸಾ.6 ರವರು ತೋರಿಸಿದ ಸ್ಥಳದಲ್ಲಿ ಪ್ರಾಸಾ.2 ಮತ್ತು ಪ್ರಾಸಾ.15 ರವರ ಸಮಕ್ಷಮ ಮಧ್ಯಾಹ್ನ 3.00 ಗಂಟೆಯಿಂದ 4.00 ಗಂಟೆಯವರೆಗೆ ನಿಪಿ.8 ರಂತೆ ಪಂಚನಾಮೆಯನ್ನು ಜರುಗಿಸಿರುತ್ತೇನೆ. ನಿಪಿ.8 ರಲ್ಲಿರುವ ಸಾಕ್ಷಿಯ ಸಹಿಯನ್ನು ನಿಪಿ.8(ಬಿ) ಎಂದು ಗುರುತಿಸಲಾಯಿತು. ಸದರಿ ಪಂಚನಾಮೆಯ ಕಾಲಕ್ಕೆ ನಿಪಿ.9 ರಂತೆ ಫೋಟೋವನ್ನು ತೆಗೆಸಿರುತ್ತೇನೆ.

8. ನಂತರ ಸಾಕ್ಷಿದಾರರಾದ ಪ್ರಾಸಾ.6 ರವರ ಹೇಳಿಕೆಯನ್ನು ನಿಪಿ.13 ರಂತೆ, ಪ್ರಾಸಾ.7 ರವರ ಹೇಳಿಕೆಯನ್ನು ನಿಪಿ.14 ರಂತೆ, ಮತ್ತು ಪ್ರಾಸಾ.10 ರವರ ಹೇಳಿಕೆಯನ್ನು ನಿಪಿ.16 ರಂತೆ ಪಡೆದುಕೊಂಡಿರುತ್ತೇನೆ.

9. ನಂತರ ಪ್ರಕರಣದ ಕಡತವನ್ನು ಮುಂದಿನ ತನಿಖೆಗಾಗಿ ಚಾಸಾ.29 ರವರಿಗೆ ನೀಡಿರುತ್ತೇನೆ ನಂತರ ಚಾಸಾ.29 ರವರ ಆದೇಶದ ಮೇರೆಗೆ ಅದೇ ದಿನ ಸಂಜೆ 6.00 ಗಂಟೆಗೆ 1 ನೇ ಆರೋಪಿಯನ್ನು ತಿಲಕ್ ಪಾರ್ಕ್ ನಲ್ಲಿರುವ ಆತನ ಮನೆಯಲ್ಲಿ ವಶಕ್ಕೆ ಪಡೆದು ಸಂಜೆ 6.30 ಗಂಟೆಗೆ ಚಾಸಾ.29 ರವರ ಮುಂದೆ ಹಾಜರುಪಡಿಸಿ ವರದಿ ನೀಡಿರುತ್ತೇನೆ. ಸದರಿ ವರದಿಯನ್ನು ನೋಡುತ್ತಿದ್ದು ಅದನ್ನು ನಿಪಿ.29 ಎಂದು ಅದರಲ್ಲಿರುವ ಸಾಕ್ಷಿಯ ಸಹಿಯನ್ನು ನಿಪಿ.29(ಎ) ಎಂದು ಗುರುತಿಸಲಾಯಿತು.

<u>ಪಾಟೀ ಸವಾಲುಃ ಶ್ರೀ ಹೆಚ್ ಜೆ ಆರ್ ವಕೀಲ ಪರವಾಗಿಃ ಶ್ರೀ ಯು ಹೆಚ್ ಎಂ ವಕೀಲರಿಂದಃಆರೋಪಿತರ ಪರವಾಗಿಃ</u>

10. ದಿನಾಂಕ 27.02.2016 ರ ಮೊದಲು ನಿಮ್ಮ ಠಾಣೆಗೆ ಈ ಪ್ರಕರಣದ ಬಗ್ಗೆ ಯಾವುದೇ ಮಾಹಿತಿ ಬಂದಿಲ್ಲ ಎಂದರೆ ಸರಿ. ದೂರು ದಾಖಲಾಗುವ ಮೊದಲು ನಮ್ಮ ಠಾಣೆಗೆ ಯಾವುದೇ ಎಂ ಎಲ್ ಸಿ ಇಂಟಿಮೇಷನ್ ಬಂದಿಲ್ಲ.

11. ದಿನಾಂಕಃ 28.02.2016 ರಂದು ಬೆಳಗಿನ ಜಾವ 3.30 ಗಂಟೆಗೆ ನಾನು ಠಾಣೆಯಲ್ಲಿದ್ದ ಸಮಯದಲ್ಲಿ ಹಾಸನ ಮಹಿಳಾ ಪೊಲೀಸ್ ಠಾಣೆಯ ಪಿ ಸಿ 244 ಮೋಹನ್ ಕುಮಾರ್ ರವರು ಹಾಸನ ಮಹಿಳಾ ಪೊಲೀಸ್ ಠಾಣೆಯಲ್ಲಿ ಮೊಕದ್ದಮೆ ಸಂಖ್ಯೆ 2/2016 ರಂತೆ ದಾಖಲಾಗಿದ್ದ ಪ್ರಕರಣದ ಕಡತವನ್ನು ಕೃತ್ಯ ನಡೆದ ಸ್ಥಳದ ಆಧಾರದ ಮೇರೆಗೆ ವರ್ಗಾವಣೆಗೊಂಡಿದ್ದ ಕಾರಣ ಸದರಿ ಪ್ರಕರಣದ ಹೇಳಿಕೆಯ ದೂರು, ಪ್ರಥಮ ವರ್ತಮಾನ ವರದಿ, ನ್ಯಾಯಾಲಯದಿಂದ ಪಡೆದುಕೊಂಡ ಅನುಮತಿ ಪತ್ರವನ್ನು ಸದರಿ ಮಹಿಳಾ ಪೊಲೀಸ್ ಠಾಣೆಯ ಆರಕ್ಷಕ ಉಪ ನಿರೀಕ್ಷಕರರಾದ ಪ್ರಾಸಾ.16 ರವರ ಪತ್ರದೊಂದಿಗೆ ತಂದು ಹಾಜರುಪಡಿಸಿರುತ್ತಾರೆ ಎಂದು ಹೇಳಿರುವುದು ಸುಳ್ಳು ಎಂದರೆ ಸರಿಯಲ್ಲ.

12. ನಾನು ಅವುಗಳನ್ನು ಸ್ವೀಕರಿಸಿ ಸದರಿ ದೂರಿನ ಮೇರೆಗೆ ನಮ್ಮ ಠಾಣೆಯಲ್ಲಿ ಮೊಕದ್ದಮೆ ಸಂಖ್ಯೆಃ 57/2016 ರಂತೆ ಪ್ರಕರಣ ದಾಖಲಿಸಿ ಪ್ರಥಮ ವರ್ತಮಾನ ವರದಿಯನ್ನು ನ್ಯಾಯಾಲಯಕ್ಕೆ ಮತ್ತು ಮೇಲಾಧಿಕಾರಿಗಳಿಗೆ ನಿವೇದಿಸಿಕೊಂಡಿರುತ್ತೇನೆ ಎಂದು ಹೇಳಿರುವುದು ಸುಳ್ಳು ಎಂದರೆ ಸರಿಯಲ್ಲ.

13. ತನಿಖೆಯ ಸಲುವಾಗಿ ಚಾಸಾ.23 ಮತ್ತು ಚಾಸಾ.24 ರವರನ್ನು ಮೃತಳ ಶವ ಪರೀಕ್ಷೆಯನ್ನು ನಡೆಸಲು ನೇಮಿಸಿ ಬೆಂಗಳೂರಿಗೆ ಕಳುಹಿಸಿಕೊಟ್ಟಿರುತ್ತೇನೆ, ನಂತರ ಪ್ರಕರಣಕ್ಕೆ ಐ ಪಿ ಸಿ ಕಲಂ 304 ಬಿ ಯನ್ನು ಅಳವಡಿಸಿಕೊಳ್ಳಲು ನ್ಯಾಯಾಲಯಕ್ಕೆ ಮನವಿ ಸಲ್ಲಿಸಿರುತ್ತೇನೆ ಎಂದು ಹೇಳಿರುವುದು ಸುಳ್ಳು ಎಂದರೆ ಸರಿಯಲ್ಲ.

14. ಪ್ರಕರಣವು ಘೋರ ಅಪರಾಧಗಳನ್ನೊಳಗೊಂಡಿದ್ದರಿಂದ ಚಾಸಾ.29 ರವರಿಗೆ ಮಾಹಿತಿ ನೀಡಿರುತ್ತೇನೆ, ಅವರು ಅನ್ಯ ಕರ್ತವ್ಯದಲ್ಲಿದ್ದ ಕಾರಣ ಅವರ ಮೌಖಿಕ ಆದೇಶದ ಮೇರೆಗೆ ತನಿಖೆಯನ್ನು ಮುಂದುವರೆಸಿರುತ್ತೇನೆ ಎಂದು ಹೇಳಿರುವುದು ಸುಳ್ಳು ಎಂದರೆ ಸರಿಯಲ್ಲ.

15. ದಿನಾಂಕ 29.02.2016 ರಂದು ಬೆಳಿಗ್ಗೆ 10.00 ಗಂಟೆಗೆ ಚಾಸಾ.23 ಮತ್ತು ಚಾಸಾ.24 ರವರು ಜರುಗಿಸಿದ ಶವ ಪಂಚನಾಮೆಯನ್ನು ತಂದು ಹಾಜರುಪಡಿಸಿದ್ದು ಅದನ್ನು ಕಡತಕ್ಕೆ ಅಳವಡಿಸಿಕೊಂಡಿರುತ್ತೇನೆ, ನಂತರ ಅದೇ ದಿನ ಮೃತ ಅನಿತಾ ಆರೋಪಿತರೊಂದಿಗೆ ವಾಸವಿದ್ದ ಚಿಕ್ಕಮಗಳೂರಿನ ತಿಲಕ್ ಪಾರ್ಕ್ ರಸ್ತೆಯಲ್ಲಿದ್ದ ರುದ್ರಪ್ಪರವರಿಗೆ ಸೇರಿದ ಮನೆಯಲ್ಲಿ ಕೃತ್ಯ ನಡೆದ ಸ್ಥಳಕ್ಕೆ ಭೇಟಿ ನೀಡಿ ಸ್ಥಳದಲ್ಲಿ ಹಾಜರಿದ್ದ ಪ್ರಾಸಾ.6 ರವರು ತೋರಿಸಿದ ಸ್ಥಳದಲ್ಲಿ ಪ್ರಾಸಾ.2 ಮತ್ತು ಪ್ರಾಸಾ.15 ರವರ ಸಮಕ್ಷಮ ಮಧ್ಯಾಹ್ನ 3.00 ಗಂಟೆಯಿಂದ 4.00 ಗಂಟೆಯವರೆಗೆ ನಿಪಿ.8 ರಂತೆ ಪಂಚನಾಮೆಯನ್ನು ಜರುಗಿಸಿರುತ್ತೇನೆ ಮತ್ತು ಸದರಿ ಪಂಚನಾಮೆಯ ಕಾಲಕ್ಕೆ ನಿಪಿ.9 ರಂತೆ ಫೋಟೋವನ್ನು ತೆಗೆಸಿರುತ್ತೇನೆ ಎಂದು ಹೇಳಿರುವುದು ಸುಳ್ಳು ಎಂದರೆ ಸರಿಯಲ್ಲ.

16. ನಂತರ ಸಾಕ್ಷಿದಾರರಾದ ಪ್ರಾಸಾ.6 ರವರ ಹೇಳಿಕೆಯನ್ನು ನಿಪಿ.13 ರಂತೆ, ಪ್ರಾಸಾ.7 ರವರ ಹೇಳಿಕೆಯನ್ನು ನಿಪಿ.14 ರಂತೆ, ಮತ್ತು ಪ್ರಾಸಾ.10 ರವರ ಹೇಳಿಕೆಯನ್ನು ನಿಪಿ.16 ರಂತೆ ಪಡೆದುಕೊಂಡಿರುತ್ತೇನೆ ಎಂದು ಹೇಳಿರುವುದು ಸುಳ್ಳು ಎಂದರೆ ಸರಿಯಲ್ಲ.

17. ನಂತರ ಪ್ರಕರಣದ ಕಡತವನ್ನು ಮುಂದಿನ ತನಿಖೆಗಾಗಿ ಚಾಸಾ.29 ರವರಿಗೆ ನೀಡಿರುತ್ತೇನೆ ನಂತರ ಚಾಸಾ.29 ರವರ ಆದೇಶದ ಮೇರೆಗೆ ಅದೇ ದಿನ ಸಂಜೆ 6.00 ಗಂಟೆಗೆ 1 ನೇ ಆರೋಪಿಯನ್ನು ತಿಲಕ್ ಪಾರ್ಕ್ ನಲ್ಲಿರುವ ಆತನ ಮನೆಯಲ್ಲಿ ವಶಕ್ಕೆ ಪಡೆದು ಸಂಜೆ 6.30 ಗಂಟೆಗೆ

ಚಾಸಾ.29 ರವರ ಮುಂದೆ ಹಾಜರುಪಡಿಸಿ ನಿಪಿ.29 ರಂತೆ ವರದಿ ನೀಡಿರುತ್ತೇನೆ ಎಂದು ಹೇಳಿರುವುದು ಸುಳ್ಳು ಎಂದರೆ ಸರಿಯಲ್ಲ. ನೀವು ಯಾವುದೇ ಹಂತದ ತನಿಖೆಯನ್ನು ನಡೆಸದೇ ಇದ್ದರೂ ಸಹ ಮೇಲಾಧಿಕಾರಿಗಳ ಮಾತು ಕೇಳಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೀರಿ ಎಂದರೆ ಸರಿಯಲ್ಲ.

ಮರು ವಿಚಾರಣೆ ಇಲ್ಲ:

(ನನ್ನ ಉಕ್ತಲೇಖನಕ್ಕೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯ್ತು)

ಓ.ಹೇ.ಕೇ.ಸ.ಇ.ಎ.ಒ.

ಸಹಿ/-
(ಭಾನುಮತಿ ಬಿ.ಸಿ)
2 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಚಿಕ್ಕಮಗಳೂರು.

ಸಾಕ್ಷಿಯ ಸಹಿ